## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ.

ಓ.ಎಸ್ ಸಂಖ್ಯೆ. **1339/2022** ಪಿ.ಡಬ್ಲೂ .1

ದಿನಾಂಕಃ 05-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲುಃ- **4** ರಿಂದ **6** ನೇ ಪ್ರತಿವಾದಿ ಪರ ಶ್ರೀ ಎನ್.ಜಿ.ಜಿ..ವಕೀಲರಿಂದಃ-

ನನ್ನ ಗಂಡನ ಹೆಸರು ಮುನಿಯಪ್ಪ ಎಂದರೆ ಹೌದು. ನನ್ನ ಗಂಡ ಮುನಿಯಪ್ಪ ಲಗುಮಕ್ಕನ ಮಗ ಎಂದರೆ ಹೌದು. ಸದರಿ ಲಗುಮಕ್ಕನಿಗೆ 6 ಜನ ಮಕ್ಕಳು. ಅವರೆಂದರೆ ನನ್ನ ಗಂಡ ಮುನಿಯಪ್ಪ, ನಾರಾಯಣಪ್ಪ , ರಾಮಪ್ಪ, ಚೆನ್ನಮ್ಮ , ಚಿಕ್ಕಚೆನ್ನಮ್ಮ, ಮುನಿಅಕ್ಕಯ್ಯಮ್ಮ. ಅವರಲ್ಲಿ ಮುನಿಅಕ್ಕಯ್ಯಮ್ಮ ಮರಣ ಹೊಂದಿದ್ದಾರೆ. ಸದರಿ ಲಗುಮ್ಮಕ್ಕನ 6 ಜನ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಹೌದು. ಮುನಿಅಕ್ಕಯ್ಯಮ್ಮನವರಿಗೆ ಮಕ್ಕಳಿಲ್ಲ. ಹಾಜರು ಮಾಡಿರುವ ದಾಖಲೆಗಳನ್ನು ನನ್ನ ಮಗ ಕೃಷ್ಣಪ್ಪ ಕೊಟ್ಟಿರುತ್ತಾರೆ. ನಿಪಿ. 1 ರ ದಾಖಲೆಗೆ ನಾನು ಸಹಿ ಮಾಡಿರುತ್ತೇನೆ. ನಿಪಿ. 1 ನ್ನು ಬರೆಯುವ ಪೂರ್ವದಲ್ಲಿ ಕಂದಾಯ ಅಧಿಕಾರಿಗಳು ಗ್ರಾಮದಲ್ಲಿ ಬಂದು ವಿಚಾರಿಸಿರುತ್ತಾರೋ ಇಲ್ಲವೋ ಗೊತ್ತಿಲ್ಲ. ನಿಪಿ. 1 ನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಬರೆದು ಹಾಜರು ಮಾಡಿರುತ್ತೇನೆ ಎಂದರೆ ಹೌದು.

3 ನೇ ಪ್ರತಿವಾದಿ ಎಲ್ಲಾ ಆಸ್ತಿಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಹೌದು. ಈ ದಾವೆಯ ಎಲ್ಲಾ ಆಸ್ತಿಗಳು 3 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎಂದರೆ ಹೌದು. ದಾವಾ ಐಟಂ ನಂ. 10 ರಿಂದ 13 ರ ಆಸ್ತಿಗಳನ್ನು 3 ನೇ ಪ್ರತಿವಾದಿ 4 ರಿಂದ 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಹೌದು. ದಿನಾಂಕಃ 21-07-1995 ರಂದು 3 ನೇ ಪ್ರತಿವಾದಿ 4 ನೇ ಪ್ರತಿವಾದಿಗೆ ದಾವಾ ಐಟಂ ನಂ. 11 ಮತ್ತು 12 ರ ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಕ್ರಯದ ಆಧಾರದ ಮೇಲೆ 4 ನೇ ಪ್ರತಿವಾದಿ ಹೆಸರಿಗೆ ಕಂದಾಯದ

ದಾಖಲೆಗಳು ಬದಲಾವಣೆಯಾಗಿದೆ ಎಂದರೆ ಗೊತ್ತಿಲ್ಲ. ಸದರಿ ಕ್ರಯದ ಆಧಾರ ದಮೇಲೆ 4 ನೇ ಪ್ರತಿವಾದಿ ದಾವಾ ಐಟಂ ನಂ. 11 ಮತ್ತು 12 ರಲ್ಲಿ ಸ್ವಾದೀನದಲ್ಲಿದ್ದಾರೆ ಎಂದರೆ ಹೌದು.

5 ನೇ ಪ್ರತಿವಾದಿ ದಾವಾ ಐಟಂ ನಂ. 13 ನ್ನು ದಿನಾಂಕಃ 21-07-1995 ರಂದು 3 ನೇ ಪ್ರತಿವಾದಿಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಹೌದು. ಸದರಿ ಕ್ರಯದ ಆಧಾರದ ಮೇಲೆ 5 ನೇ ಪ್ರತಿವಾದಿ ಹೆಸರಿಗೆ ಕಂದಾಯದ ದಾಖಲೆಗಳು ಬದಲಾವಣೆಯಾಗಿದ್ದು, ಅವರೆ ಸ್ವಾನದಲ್ಲಿದ್ದಾರೆ ಎಂದರೆ ಹೌದು.

6 ನೇ ಪ್ರತಿವಾದಿ ತಂದೆ ವೆಂಕಟಪ್ಪನವರು ಸರ್ವೆ ನಂ. 76 ರ ಪೈಕಿ ಜಮೀನನ್ನು 3 ನೇ ಪ್ರತಿವಾದಿಯಿಂದ ದಿನಾಂಕಃ 21-07-1995 ರಂದು ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಕ್ರಯದ ಆಧಾರದ ಮೇಲೆ 6 ನೇ ಪ್ರತಿವಾದಿ ಹೆಸರಿಗೆ ಕಂದಾಯದ ದಾಖಲೆಗಳು ಬದಲಾವಣೆಯಾಗಿದ್ದು, ಅವರೆ ಸ್ವಾನದಲ್ಲಿದ್ದಾರೆ ಎಂದರೆ ಹೌದು. ಈಗ ವೆಂಕಟಪ್ಪ ಮಗ ಹೊಂದಿದ್ದು, ಅವರ ಮಗ ಸ್ವಾದೀನದಲ್ಲಿದ್ದಾರೆ ಎಂದರೆ ಹೌದು. ನಾನು ಗೂಗೂಟ್ಟಹಳ್ಳಿಯಲ್ಲಿ ವಾಸ ಇದ್ದೇನೆ. 2 ನೇ ವಾದಿ ಓಬಳಹಳ್ಳಿಯಲ್ಲಿ ವಾಸ ಇದ್ದಾರೆ. ನಾವು ಆಲಗೊಂಡನಹಳ್ಳಿ ಗ್ರಾಮಕ್ಕೆ ಆಗಾಗ ಹೋಗಿ ಬಂದು ಮಾಡುತ್ತೇವೆ ಎಂದರೆ ಇಲ್ಲ. ವಾದಿಯರಾದ ನಮಗೆ ಮತ್ತು 1 ರಿಂದ 3 ನೇ ಪ್ರತಿವಾದಿಗಳಿಗೆ ಮೇಲೆ ಹೇಳಿದ ಕ್ರಯ ಆಗಿರುವ ವಿಚಾರ ಗೊತ್ತಿತ್ತು ಎಂದರೆ ಹೌದು. 4 ರಿಂದ 6 ನೇ ಪ್ರತಿವಾದಿಗಳಿಗೆ ಕ್ರಯದ ಆಧಾರದ ಮೇಲೆ ಕಂದಾಯದ ದಾಖಲೆಗಳು ಬದಲಾವಣೆಯಾಗಿರುವ ವಿಚಾರ ಗೊತ್ತಾಗಿರಲಿಲ್ಲ. ಸದರಿ ಕಂದಾಯದ ದಾಖಲೆಗಳು ಬದಲಾವಣೆಯಾದ ಬಗ್ಗೆ ನಾನು ಪ್ರಶ್ನೆ ಮಾಡಿಲ್ಲ.

ಆಲಗೊಂಡನಹಳ್ಳಿಯಲ್ಲಿ ನಮ್ಮ ಕುಟುಂಬಕ್ಕೆ ಸೇರಿದ 3 ಮನೆಗಳಿವೆ. ಸದರಿ ಮನೆಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಸರ್ವೆ ನಂ. 48/2 ರಲ್ಲಿ ಶಾಲಾ ಕಟ್ಟಡ ಮತ್ತು ಅಂಗನವಾಡಿ ಇದೆ ಎಂದರೆ ಸರಿ. ಸದರಿ ಜಮೀನನ್ನು ಸರ್ಕಾರಕ್ಕೆ 3 ನೇ ಪ್ರತಿವಾದಿ ದಾನವಾಗಿ ಕೊಟ್ಟಿದ್ದು ಅಲ್ಲೇ ಶಾಲಾ ಕಟ್ಟಡ ಮತ್ತು ಅಂಗನವಾಡಿ ನಡೆಸುತ್ತಿದ್ದಾರೆ ಎಂದರೆ ಸರಿ. ಸದರಿ ಸರ್ಕಾರವನ್ನು ಈ ದಾವೆಯಲ್ಲಿ

ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಹೌದು. ನಾನು ಈ ದಾವೆಯನ್ನು 1 ರಿಂದ 3, 8 ರಿಂದ 10 ನೇ ಪ್ರತಿವಾದಿಗಳ ಮಾತನ್ನು ಕೇಳಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯನ್ನು ಈಗ್ಗೆ 12 ವರ್ಷಗಳ ಹಿಂದೆ ನಾವು ಭಾಗ ಕೇಳಿರುತ್ತೇವೆ. ಸದರಿ ಭಾಗ ಕೇಳುವ ಹಿಂದಿನಿಂದಲೂ 4 ರಿಂದ 6 ನೇ ಪ್ರತಿವಾದಿಗಳು ದಾವಾ ಐಟಂ ನಂ. 10 ರಿಂದ 13ರ ಸ್ವಾಧೀನದಲ್ಲಿದ್ದಾರೆ ಎಂದರೇ ಹೌದು.

1 ಮತ್ತು 2 ನೇ ಪ್ರತಿವಾದಿಗಳು ಈಗ ಮರಣ ಹೊಂದಿದ್ದಾರೆ ಎಂದರೆ ಹೌದು. ಅವರಿಬ್ಬರಿಗೂ ಮಕ್ಕಳು ಇದ್ದಾರೆ ಎಂದರೆ ಸರಿ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆಯೋ ಗೊತ್ತಿಲ್ಲ. ದಾವಾ ಐಟಂ ನಂ. 10 ರಿಂದ 13ರ ಆಸ್ತಿಗಳು ನಮ್ಮ ಒಟ್ಟು ಕುಟುಂಬದ ಆಸ್ತಿಗಳಲ್ಲದೆ ಇರುವುದರಿಂದ ಅವುಗಳಲ್ಲಿ ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1995 ರ ಪೂರ್ವದಲ್ಲಿಯೇ ಸದರಿ ಆಸ್ತಿಗಳು ಮಾರಾಟ ಆಗಿರುವುದರಿಂದ ನಮಗೆ ಯಾವುದೇ ಹಿಸ್ಸಾ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. 4 ರಿಂದ 6 ನೇ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಉಳಿದ ಪ್ರತಿವಾದಿಗಳು ಗೈರು ಹಾಜರು. ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು.)**

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೊಸಕೋಟೆ.